# ಕಾಣದಂತೆ ಮಾಯವಾಯಿತೊ ಪ್ರೈವಸಿ!



ಈಗ ಕಾಲ ಬದಲಾಗಿದೆ. ಖಾಸಗಿ ಬದುಕು ಕೂಡ ಸೋಷಿಯಲ್ ಮೀಡಿಯಾ ಸರಕಾಗಿದೆ. ಹುಟ್ಟಿನಿಂದ ಹಿಡಿದು ಸಾವಿನವರೆಗೂ ಸೆನ್ಸಾರ್ ಕಟ್ ಇಲ್ಲದೆ ವಿಷಯಗಳು ಜಗಜ್ಜಾಹೀರಾಗುತ್ತಿವೆ. ಒಟ್ಟಿನಲ್ಲಿ ಪ್ರೈವಸಿ ಎಂಬುದು ಮಾಯವಾಗುತ್ತಿದೆ...

■ ಸವಿತಾ ಮಾಧವ ಶಾಸ್ತ್ರಿ

ಮನೆಗೆಲಸ ಮುಗಿದ ಮೇಲೆ ಮೊಬೈಲ್ ಹಿಡಿದು ಇನ್‌ಸ್ಟಾಗ್ರಾಂನಲ್ಲಿ ರೀಲ್ಸ್ ನೋಡುತ್ತಿದ್ದೆ. ಥಟ್ಟನೆ ನನ್ನ ನೋಟ ಒಂದು ರೀಲ್ಸ್‌ನತ್ತ ನಿಂತುಬಿಟ್ಟಿತು. ಮೂರ್ನಾಲ್ಕು ಸಲ ಅದೇ ರೀಲ್ಸನ್ನು ನೋಡಿದೆ. ಸಂಶಯವೇ ಇಲ್ಲ. ಇದು ನಾನೇ! ಅಯ್ಯೋ! ರೆಸ್ಟೋರೆಂಟ್ ಒಂದರಲ್ಲಿ ಇಡ್ಲಿ ವಡೆ ಕತ್ತರಿಸುತ್ತಿರುವ ನನ್ನ ವಿಡಿಯೊ ಇನ್‌ಸ್ಟಾಗ್ರಾಂ ರೀಲ್ಸ್‌ನಲ್ಲಿ ಹೇಗೆ ಬಂತು ಅಂತ ತಲೆಬಿಸಿ ಆಯ್ತು. ವಾರದ ಹಿಂದೆ ಗೆಳತಿಯೊಡನೆ ಅಲ್ಲಿಗೆ ಹೋಗಿದ್ದೆ. ಯಾರೋ ಫುಡ್ ವ್ಲಾಗರ್ ಆ ರೆಸ್ಟೋರೆಂಟ್ ಫುಡ್ ರಿವ್ಯೂ ವಿಡಿಯೊ ಮಾಡುವಾಗ ನಾನೂ, ನನ್ನ ಗೆಳತಿಯೂ ಏನೋ ಹರಟೆ ಹೊಡೆಯುತ್ತಾ ತಿಂಡಿ ಸವಿಯುವ ದೃಶ್ಯ ಆ ವಿಡಿಯೊದಲ್ಲಿ ಸೆರೆಯಾಗಿಬಿಟ್ಟಿದೆ!

ಹೌದು, ಈಗ ಜಮಾನ ಬದಲಾಗಿದೆ. ಮೊದಲೆಲ್ಲ ತೀರಾ ಖಾಸಗಿ ಎನ್ನುವ ಕ್ಷಣಗಳು ಕೂಡ ಈಗ ಈ ಸೋಷಿಯಲ್ ಮೀಡಿಯಾದಿಂದ ಬಟಾಬಯಲಾಗುತ್ತಿವೆ. ಕೆಲವರು ತಾವಾಗೇ ತಮ್ಮ ವೈಯಕ್ತಿಕ ಜೀವನದ ಸವಿಕ್ಷಣಗಳನ್ನು ಜಗತ್ತೆಲ್ಲ ನೋಡಲಿ ಎಂದು ತಮ್ಮ ಸ್ಟೇಟಸ್‌ನಲ್ಲಿ, ಇನ್‌ಸ್ಟಾಗ್ರಾಂನಲ್ಲಿ, ಫೇಸ್‌ಬುಕ್‌ನಲ್ಲಿ ಹರಿಬಿಟ್ಟಿರುತ್ತಾರೆ. ಮನೆಯಲ್ಲಿ ಆಚರಿಸಿದ ಹಬ್ಬ, ಮಾಡಿದ ತಿಂಡಿ, ತಿರುಗಾಡಿದ ಸ್ಥಳಗಳು, ಜಿಮ್‌ನಲ್ಲಿ ವರ್ಕೌಟ್ ಮಾಡಿ ಹರಿಸಿದ ಬೆವರ ಹನಿಗಳು, ತಮ್ಮ ಮಕ್ಕಳು ಮುದ್ದುಮುದ್ದಾಗಿ ಮಾತಾಡಿದ್ದು, ಸೆಲೆಬ್ರಿಟಿಗಳ ಜೊತೆ ನಿಂತು ತೆಗೆಸಿಕೊಂಡ ಫೋಟೊಗಳು, ಓದಿದ ಪುಸ್ತಕಗಳು – ಹೀಗೆ ಎಲ್ಲವನ್ನೂ ಹಂಚಿಕೊಂಡು ಖುಷಿಪಡುತ್ತಾರೆ.

ಕೆಲವರಂತೂ ತಮ್ಮದೇ ಒಂದು ಡೇಲಿ ವ್ಲಾಗ್ಸ್ ಯೂಟ್ಯೂಬ್ ಚಾನಲ್ ಪ್ರಾರಂಭಿಸಿ ಅದರಲ್ಲಿ ತಾವು ದಿನಾ ಏನೆಲ್ಲ ಕೆಲಸ ಮಾಡ್ತೀವಿ, ಹೇಗೆ ಮನೆಗೆಲಸ ನಿಭಾಯಿಸುತ್ತೀವಿ, ಕಸ ಎಷ್ಟು ಹೊತ್ತಿಗೆ ಗುಡಿಸ್ತೀವಿ, ನೆಲ ಯಾವಾಗ ಒರೆಸ್ತೀವಿ, ಮಕ್ಕಳನ್ನು ಹೇಗೆ ಬೆಳೆಸ್ತಾ ಇದೀವಿ, ಮಾಡಿದ ಅಡುಗೆ, ತಿಂಡಿ, ಶಾಪಿಂಗ್, ಬಾತ್ ರೂಂ ಕ್ಲೀನಿಂಗ್– ಹೀಗೆ ಏನೇನೊ ವಿಡಿಯೊ ಅಪ್ಲೋಡ್ ಮಾಡುತ್ತಾ ಇರುತ್ತಾರೆ. ಇದನ್ನೆಲ್ಲ ಯಾರು ನೋಡುತ್ತಾರೆ ಅಂದುಕೊಳ್ಳಬೇಡಿ. ಇಂತಹ ವಿಡಿಯೊಗಳನ್ನು ನೋಡಿ ಸ್ಫೂರ್ತಿ ಪಡೆದು ತಮ್ಮ ಮನೆಗೆಲಸವನ್ನು ಹುಮ್ಮಸ್ಸಿನಿಂದ ಮಾಡುವವರ ಸಂಖ್ಯೆಯೇನೂ ಕಮ್ಮಿಯಿಲ್ಲ!

ಇಂತಹ ವಿಡಿಯೊಗಳನ್ನು ನೋಡಿ 'ಅಡುಗೆ ಮನೆಯಲ್ಲಿ ನಾನೊಬ್ಬಳೇ ಬೇಯೋದಲ್ಲ, ನನ್ನಂತೆ ಅನೇಕರಿದ್ದಾರೆ' ಎಂದು ಸಮಾಧಾನವಾಗುತ್ತದೆ, ಜೊತೆಗೆ ನಮಗೂ ಮನೆಗೆಲಸ ಮಾಡಲು ಇನ್ನಷ್ಟು ಎನರ್ಜಿ ಬರುತ್ತದೆ' ಎನ್ನುವವರೂ ಇದ್ದಾರೆ. ಕೆಲವರಂತೂ ತಾವು ದೋಸೆ ಹುಯ್ಯುವ, ತರಕಾರಿ ಕತ್ತರಿಸುವ, ಬಟ್ಟೆ ಒಗೆಯುವ ದೃಶ್ಯಗಳ ಸಣ್ಣ ಸಣ್ಣ ವಿಡಿಯೊ ಮಾಡಿ ಅದಕ್ಕೆ ಹಿನ್ನೆಲೆಯಲ್ಲಿ ಫಿಲ್ಮ್ ಸಾಂಗ್ ಹಾಕಿ ರೀಲ್ಸ್ ಮಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತಾರೆ. ಇಂಪಾದ ಆ ಹಾಡಿನಿಂದಾದರೂ ತಾವು ಫೇಮಸ್ ಆಗಬೇಕು ಎಂದು ಕನಸು ಕಾಣುತ್ತಾರೆ. ಅವರ ಎಣಿಕೆ ಒಮ್ಮೊಮ್ಮೆ ನಿಜವಾಗುವುದೂ ಉಂಟು! ಡೇಲಿ ವ್ಲಾಗ್ಸ್, ಕುಕಿಂಗ್ ಚಾನಲ್‌ಗಳು ಒಂದರ್ಥದಲ್ಲಿ ಕೆಲವು ಗೃಹಿಣಿಯರಿಗೆ ಉದ್ಯೋಗವನ್ನೂ ಕಲ್ಪಿಸಿವೆ.

ಪ್ರತಿಯೊಬ್ಬರ ಕೈಗೂ ಸ್ಮಾರ್ಟ್‌ಫೋನ್ ಬಂದ ಮೇಲೆ ಫೋಟೊಗ್ರಾಫರ್, ವಿಡಿಯೊಗ್ರಾಫರ್‌ಗಳನ್ನೂ ಹಿಂದಿಕ್ಕಿ ತಾವೇ ಮುನ್ನುಗ್ಗಿ ಫೋಟೊ ಕ್ಲಿಕ್ಕಿಸಿ, ವಿಡಿಯೊ ಮಾಡುವವರ ಸಂಖ್ಯೆ ಹೆಚ್ಚುತ್ತಿದೆ. ಕೆಲವರಂತೂ ತಾವು ಯಾರ್‍ಯಾರದೋ ಮದುವೆಗೋ, ಎಂಗೇಜ್ಮೆಂಟ್‌ಗೋ ಹೋಗಿ ಅಲ್ಲಿ ಫೋಟೊಗ್ರಾಫರ್, ವಿಡಿಯೊಗ್ರಾಫರ್‌ಗಳಿಗೂ ನೆಮ್ಮದಿಯಿಂದ ತಮ್ಮ ಕೆಲಸ ಮಾಡಲು ಬಿಡದೆ ಅವರೊಂದಿಗೆ ಪೈಪೋಟಿಗೆ ನಿಂತು ಫೋಟೊ, ವಿಡಿಯೊ ಮಾಡಿ ತಾವೇ ಮೊದಲು ಎಂಬಂತೆ ಅದನ್ನು ತಮ್ಮ ಸ್ಟೇಟಸ್‌ನಲ್ಲಿ, ಫೇಸ್‌ಬುಕ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ಅಪ್ಲೋಡ್ ಮಾಡಿಬಿಡುತ್ತಾರೆ. ಇದು ಕೆಲವರ ತೀರಾ ವೈಯಕ್ತಿಕ ಕ್ಷಣಗಳನ್ನು ಅವರ ಪರ್ಮಿಷನ್ ಇಲ್ಲದೆ ಪ್ರಪಂಚಕ್ಕೆ ಸಾರಿದಂತಲ್ಲದೆ ಮತ್ತೇನು?

ಇತ್ತೀಚೆಗೆ ಕೆಲವರು ತಮ್ಮ ಪರಿಚಯದವರು ಯಾರಾದರೂ ಪರಲೋಕವಾಸಿಯಾದರೆ ತಕ್ಷಣವೇ ತಮ್ಮ ಗ್ಯಾಲರಿಯಲ್ಲಿರುವ ಅವರ ಫೋಟೊ ಹುಡುಕಾಡಿ ಅದನ್ನು ಸ್ಟೇಟಸ್‌ಗೆ, ಫೇಸ್‌ಬುಕ್‌ಗೆ ಹಾಕಿ 'ಓಂ ಶಾಂತಿ' ಎಂದು ಹಾಕಿಬಿಡುತ್ತಾರೆ. ಹೀಗೆ ಹಾಕುವವರ ಸಂಖ್ಯೆ ವಿಪರೀತಕ್ಕೇರಿ ಈಗ ಸಾವಿನ ಸುದ್ದಿ ಬಂಧುಬಳಗದವರಿಗೆ, ಪರಿಚಯದವರಿಗೆ ಸೂಪರ್ ಸಾನಿಕ್ ಸ್ಪೀಡ್‌ನಲ್ಲಿ ತಲುಪಿಬಿಟ್ಟಿರುತ್ತದೆ. ಕೆಲವರು ತಮ್ಮ ಪರಿಚಯದವರ ಜೊತೆ ನಿಂತು ಫೋಟೊ ತೆಗೆಸಿಕೊಳ್ಳೋದು ಇದೇ ಉದ್ದೇಶಕ್ಕೇನೊ ಎಂದು ಅನುಮಾನ ಕಾಡುತ್ತದೆ.

ಕೆಲವರಂತೂ ಹೋದಲ್ಲಿ ಬಂದಲ್ಲಿ ತಮ್ಮ ಸೆಲ್ಫೀ ತೆಗೆದುಕೊಳ್ಳುವ ಭರದಲ್ಲಿ ತಮ್ಮ ಹಿಂದೆ ಮುಂದೆ ಆಚೆ ಈಚೆ ಯಾರಿದ್ದಾರೆ ಎಂದು ಕೂಡ ನೋಡದೆ